ಸಂಪಾದಕೀಯ

ಭಗವದ್ರಹಸ್ಯ

(ಭಾಗ ೩ – ಈಶ್ವರ ರಹಸ್ಯ)

ಭಗವಂತನ ಅಸ್ತಿತ್ವ

ದೇವರನ್ನು ನಂಬದ ನಾಸ್ತಿಕರಿದ್ದಾರೆ. ಸಂದೇಹಿಸುವ ಅಜ್ಞೇಯ ವಾದಿಗಳೂ ಇದ್ದಾರೆ. ಅವರು ವಿಶ್ವವನ್ನು ನಿರಾಕರಿಸಲಾರರು. ಆದರೆ ವಿಶ್ವ ರಚನೆಯ ಹಿಂದೆ ಅತೀಂದ್ರಿಯ ಶಕ್ತಿಯೊಂದು ಕಾರ್ಯವೆಸಗುತ್ತಿದೆ ಎನ್ನುವುದನ್ನು ನಿರಾಕರಿಸುತ್ತಾರೆ. ವಿಶ್ವದ ಒಡೆಯನಾಗಿದ್ದುಕೊಂಡು, ಜಗತ್ತಿನ ದುಃಖಿಗಳಿಗೆ ಸ್ಪಂದಿಸದ ಕ್ರೂರಿಯಾದ ದೇವರನ್ನು ಅವರು ನಿರಾಕರಿಸುತ್ತಾರೆ; ದೇಗುಲಗಳಲ್ಲಿ ಪೂಜಿಸಲ್ಪಡುವ ದೇವತಾಮೂರ್ತಿಗಳನ್ನು ನಿರಾಕರಿಸುತ್ತಾರೆ.

> **"ಇದಕ್ಕಿಂತಲೂ ಶ್ರೇಷ್ಠವಾದುದು ಬೇರೆ ಯಾವುದೂ ಇಲ್ಲ ಎಂದು ಭಗವಂತನನ್ನು ಅರಿತುಕೊಂಡಾಗ ಮಾತ್ರ ನಾವು ನಿಜವಾಗಿ ಅವನನ್ನು ತಿಳಿದಿರುವೆವು. ಇದನ್ನು ಬಿಟ್ಟು ಬೇರಾವ ವಿಧದಿಂದಲೂ ದೇವರನ್ನು ನಾವು ಅರಿಯಲಾರೆವು... ಏಕೆಂದರೆ, ಒಂದು ವಸ್ತುವು ನಮ್ಮ ಅರಿವಿನ ಪರಿಧಿಯ ಒಳಗೆ ಬರುವುದು ಎಂದು ತಿಳಿಯುವುದು ಬೇರೆ, ಒಂದು ವಸ್ತುವು ಇದೆ ಎಂದು ತಿಳಿಯುವುದು ಬೇರೆ... ಹೀಗಾಗಿ ಯಾವನು ಭಗವಂತನನ್ನು ಆತನ ನೈಜರೂಪದಲ್ಲಿ ಅರಿತಿರುವನೋ, ಅವನು ಭಗವಂತನು ಇಲ್ಲ ಎಂದು ಕಲ್ಪಿಸಿಕೊಳ್ಳಲಾರನು."**
>
> – *ಆನ್ಸೆಲಮ್* (Anselm)

ಅಜ್ಞೇಯತಾವಾದಿಯು ತರ್ಕದ ಒರೆಗಲ್ಲಿಗೆ ಸಿಲುಕಲಾರದ ಯಾವುದರ ಅಸ್ತಿತ್ವವನ್ನೂ ಒಪ್ಪುವುದಿಲ್ಲ. ಏಕೆಂದರೆ ಅಂತಹ ವಸ್ತು ಇರಬಹುದು, ಇಲ್ಲದೆ ಇರಲೂಬಹುದು. ತರ್ಕ ಮಾತ್ರವೇ ಅದನ್ನು ನಿರ್ಣಯಿಸುವ ಶಕ್ತಿ ಹೊಂದಿದೆ. ಅದಲ್ಲದೆ, ದೇವರ ಅಸ್ತಿತ್ವಕ್ಕೆ ಬೇಕಾದ ಸರಿಯಾದ ಪುರಾವೆ ನಮಗೆ ದೊರಕುವುದೂ ಅಸಾಧ್ಯ. ಮೋಸೆಸ್ ಮೈಮೊನಿಡಸ್ ಎಂಬ ಗ್ರೀಕ್ ಚಿಂತಕನು ತರ್ಕದಿಂದಲೂ ಭಗವಂತನ ಅಸ್ತಿತ್ವವನ್ನು ಸಾಬೀತು ಪಡಿಸಬಹುದು, ಅದಕ್ಕಾಗಿ ನಂಬಿಕೆ ಮಾತ್ರ ಬೇಕು ಎಂದೇನಲ್ಲ ಎನ್ನುತ್ತಾನೆ. ಅವನ ಪ್ರಕಾರ ಜಗತ್ತಿನ ವಸ್ತುಗಳ ಜೊತೆಗೆ ದೇವರನ್ನು ಹೋಲಿಸಬಾರದು. ನಾವು ದೇವರು ಎಂದು ಈಗ ಕರೆಯುವುದು ಈ ಬಗೆಯ ಹೋಲಿಕೆಗಳಿಂದ ಆದ ಕಲ್ಪನೆಯಷ್ಟೆ. ವಿವಿಧ ರೂಪಗಳಲ್ಲಿ ಕಾಣುವ ವಸ್ತುಗಳ ಅಸ್ತಿತ್ವವನ್ನು ನಾವು ಹೇಗೆ ನಂಬುತ್ತೇವೆಯೋ ಅದೇ ರೀತಿ, ಅವುಗಳ ಹಿಂದಿರುವ ಸಾರಭೂತ ವಸ್ತುವಿನ ಅಸ್ತಿತ್ವವನ್ನೂ ನಂಬಲೇಬೇಕು. **ಆ ಸಾರಭೂತ ವಸ್ತುವೇ ದೇವರು** – ಇದು ಅವನ ನಿಲುವು.

ಭಗವಂತನನ್ನು ನಾವು ವಿಷಯವಸ್ತುಗಳ ಹಾಗೆ ತಿಳಿಯಲಾರೆವು ಎನ್ನುವುದು ಇದರಿಂದ ಸ್ಪಷ್ಟವಾಗುವುದು. ಅದನ್ನೇ ಥಾಮಸ್ ಅಕ್ವಿನಾಸ್ ಎಂಬ ಸಂತನು ಮಾರ್ಮಿಕವಾಗಿ ಹೀಗೆ ಹೇಳುತ್ತಾನೆ: "ನಾವು ದೇವರ ಬಗ್ಗೆ ತಿಳಿದುಕೊಳ್ಳಲಾರೆವು, ಆದರೆ ಯಾವುದು ದೇವರಲ್ಲ ಎಂದು ತಿಳಿದುಕೊಳ್ಳಬಲ್ಲೆವು." ಮುಂದುವರೆದು, ಅವನೇ ದೇವರ ಅಸ್ತಿತ್ವವನ್ನು ಹೇಗೆ ಗ್ರಹಿಸಬೇಕು ಎಂದು ಹೇಳಿಕೊಡುತ್ತಾನೆ: "ನಾವು ಭಗವಂತನು ಒಳ್ಳೆಯವನು ಎಂದು ಹೇಳಿದಾಗ, ಒಳ್ಳೆಯತನಕ್ಕೆ ಅವನೇ ಕಾರಣ ಎಂದಾಗಲೀ, ಕೆಡುಕುತನಕ್ಕೆ ಅಲ್ಲವೆಂದಾಗಲೀ ಅರ್ಥ ಮಾಡಿಕೊಳ್ಳಬಾರದು. ನಾವು ಜೀವಿಗಳನ್ನು ಕುರಿತು ಹೇಳುವ ಒಳ್ಳೆಯತನವು ಅದಕ್ಕೆ ಮೊದಲೇ ಭಗವಂತನಲ್ಲಿ, ಅದೂ ಬಹಳ ಶ್ರೇಷ್ಠ ರೂಪದಲ್ಲಿ ಇತ್ತು ಎನ್ನುವುದನ್ನು ಸೂಚಿಸುತ್ತದೆ ಎಂದು ಅರ್ಥ ಮಾಡಿಕೊಳ್ಳಬೇಕು."

ಮಾಂಟೇನ್ ಎಂಬ ಚಿಂತಕನ ಪ್ರಕಾರ, ಶ್ರದ್ಧೆ ಅಥವಾ ನಂಬಿಕೆ ಮಾತ್ರವೇ ಭಗವಂತನ ಅಸ್ತಿತ್ವವನ್ನು ಸಾಬೀತುಪಡಿಸಬಲ್ಲುದು. ಅವನ ಪ್ರಕಾರ ಶ್ರದ್ಧೆ ಮತ್ತು ತರ್ಕಗಳು ಪರಸ್ಪರ ವಿರೋಧಿಗಳಲ್ಲ. ಶ್ರದ್ಧೆಯು ವೈಚಾರಿಕತೆಯನ್ನು ಹಲವು ವಿಧಗಳಲ್ಲಿ ಪೋಷಿಸುತ್ತದೆ ಮತ್ತು ವೈಚಾರಿಕತೆಯೂ ಶ್ರದ್ಧೆಯ ಅಧಿಕೃತತೆಗೆ ಸಹಾಯ ಮಾಡುತ್ತದೆ. ಶ್ರದ್ಧೆ ಮತ್ತು ತರ್ಕಗಳೆರಡಕ್ಕೂ ಸಂಬಂಧಿಸಿದ ವಿಷಯಗಳಲ್ಲಿ ಶ್ರದ್ಧೆಯು ಹೆಚ್ಚಿನ ನಿಶ್ಚಿತತೆಯನ್ನು ಒದಗಿಸಬಲ್ಲುದು. ಕೇವಲ ಶ್ರದ್ಧೆಗೆ ಸಂಬಂಧಿಸಿದ ವಿಷಯಗಳಲ್ಲಿ ತರ್ಕವು ತಕ್ಕಮಟ್ಟಿನ ತಿಳಿವಳಿಕೆಯನ್ನು ಮೂಡಿಸಬಲ್ಲುದು. ಆದರೆ ಅಂತಹ ಅರಿವು ಪರಿಪೂರ್ಣವಾದುದು ಮತ್ತು ಸತ್ಯಕ್ಕೆ ಹತ್ತಿರವಾದುದು ಎಂದು ಹೇಳಲು ಸಾಧ್ಯವಿಲ್ಲ.

ಶ್ರದ್ಧೆ ಮತ್ತು ತರ್ಕಗಳನ್ನು ಮೀರಿರುವ ಪ್ರಜ್ಞಾಕ್ಷೇತ್ರವೊಂದಿದೆ. ಅದೇ ಅನುಭಾವ (Mysticism). ಅದನ್ನು ಪ್ರಜ್ಞಾತೀತದೊಡನೆ ಇರುವ ಆಪ್ಯಾಯಮಾನ ಸಂಬಂಧ ಎಂದು ಬಣ್ಣಿಸಲಾಗಿದೆ (Intimate acquaintance with Supernatural) ದೃಷ್ಟಿಯು ಮಾತಿಗಿಂತಲೂ ಸುಸ್ಪಷ್ಟವಾಗಿರುವ ಸ್ಥಿತಿ ಅದು ಎಂದು ದಾರ್ಶನಿಕ ಕವಿ ಡಾಂಟೆ ಅನುಭಾವವನ್ನು ಬಣ್ಣಿಸುತ್ತಾನೆ. ಅದು ಮಾನವನ ಮನಸ್ಸು ಸಾಧಾರಣ ಅನುಭವಗಳಿಗಿಂತ ಮೇಲೇರಿ ಹೋಗುವ ಪ್ರಯತ್ನವಾಗಿದೆ. ಅಲ್ಲಿ ಸತ್ಯವು ಹೆಚ್ಚು ನಿರ್ದುಷ್ಟವಾಗಿಯೂ ನಿಖರವಾಗಿಯೂ ಕಾಣಬರುತ್ತದೆ. ವೈಚಾರಿಕತೆ ಮತ್ತು ಶ್ರದ್ಧೆ ಇವುಗಳಿಗಿಂತ ಮಿಗಿಲಾಗಿ ಅನುಭಾವವೇ ಭಗವಂತನ ಅಸ್ತಿತ್ವದ ದ್ಯೋತಕವಾಗಿದೆ. ಲಾಕ್ ಎಂಬ ಚಿಂತಕ ಹೀಗೆ ಹೇಳುತ್ತಾನೆ: "ನಮ್ಮ ಅಸ್ತಿತ್ವದ ಬಗ್ಗೆ ನಮಗೆ ಅರಿವಿದೆ (ಅದು ನಮ್ಮ ಅನುಭವವೂ ಆಗಿದೆ). ಇಲ್ಲದಿರುವುದು ಇರುವುದನ್ನು ಸೃಷ್ಟಿಸಲಾರದು. ಆದ್ದರಿಂದ ನಮ್ಮ ಇರುವಿಕೆಯೇ, ನಮ್ಮ ಅಸ್ತಿತ್ವದ ಮೂಲವಾದ, ನಮಗಿಂತಲೂ ಶಕ್ತಿಶಾಲಿಯೂ ನಿತ್ಯವೂ ಸರ್ವಜ್ಞನೂ ಆದ ಪರಮ ಪುರುಷನ ಇರುವಿಕೆಯನ್ನು ಪರಿಭಾವಿಸುವಂತೆ ಮಾಡುತ್ತದೆ." ಅನುಭಾವದ ತಳಹದಿಯೇ ಇದು. ಮಾನವ ತನ್ನ ಬಗೆಗಿನ ದೃಷ್ಟಿಯನ್ನು, ತನ್ನ ಅನುಭವವನ್ನು ಹೆಚ್ಚು ಹೆಚ್ಚು ವ್ಯಾಪಕಗೊಳಿಸಿಕೊಂಡ ಹಾಗೆಲ್ಲ, ತನ್ನನ್ನು ಮೀರಿರುವ ಅತೀಂದ್ರಿಯ ಶಕ್ತಿಯೊಂದರ ಅನುಭವವನ್ನೂ ಹೆಚ್ಚು ಹೆಚ್ಚು ಗಾಢವಾಗಿಸಿಕೊಳ್ಳುತ್ತ, ಉನ್ನತಗೊಳಿಸಿಕೊಳ್ಳುತ್ತಾ ಹೋಗುತ್ತಾನೆ. **ಅದು ಎಲ್ಲಿ ತನ್ನ ಚರಮ ಸೀಮೆಯನ್ನು ಮುಟ್ಟುವುದೋ ಅದನ್ನೇ ದೇವರೆಂದು ಕರೆಯುವುದು.** ಹೀಗೆ ಪಾಶ್ಚಾತ್ಯ ಚಿಂತನೆಯಲ್ಲಿ ದೇವರ ಅಸ್ತಿತ್ವದ ಬಗ್ಗೆ ಅನೇಕ ಬಗೆಯ ಆಲೋಚನಾ ಲಹರಿಗಳನ್ನು ನಾವು ಕಾಣುತ್ತೇವೆ.

'ದೇವರು' ಎಂಬ ಶಬ್ದವು ಆರೈಕೆ, ದಯೆ, ಒಳಿತುಗಳನ್ನು ಸೂಚಿಸುತ್ತದೆ. ಭಗವಂತನ ಭಾವವಿರುವುದು ಅವರ ಅನಂತತೆಯಲ್ಲಿ. ಭಗವಂತನು ಅನಂತ ಆರೈಕೆಯನ್ನು, ಅನಂತ ಅನುಕಂಪವನ್ನು, ಅನಂತ ಒಳಿತನ್ನು ಪ್ರತಿನಿಧಿಸುತ್ತಾನೆ. 'ದೇವರು' ಎಂಬ ಪದವು ಇವೆಲ್ಲವುಗಳ ಸಂಕ್ಷಿಪ್ತ ರೂಪವಾಗಿದೆ. – *ಎಚ್. ಡಬ್ಲ್ಯು. ಬೀಚರ್*

ದೇವರು ಅನ್ನಿಸಿಕೊಳ್ಳುವವನೊಬ್ಬನು ವಿಜ್ಞಾನದಲ್ಲಿಯೂ ಇದ್ದಾನೆ, ಇತಿಹಾಸದಲ್ಲಿಯೂ ಇದ್ದಾನೆ ಮತ್ತು ಅಂತಃಸಾಕ್ಷಿಯಲ್ಲೂ ಇದ್ದಾನೆ. ಹಾಗೂ ಅವು ಮೂರೂ ಒಬ್ಬನೇ ಆಗಿದ್ದಾನೆ. –*ಜೋಸೆಫ್ ಕುಕ್*

ಎರಡು ವಿಧಾನಗಳು

ಭಗವಂತನ ಬಗ್ಗೆ ಎರಡು ಪರಿಕಲ್ಪನೆಗಳನ್ನು ನಾವು ಪಾಶ್ಚಾತ್ಯ ಚಿಂತನೆಯಲ್ಲಿ ಕಾಣಬಹುದಾಗಿದೆ. **ಮೊದಲನೆಯದು, ಭಗವಂತನು ಅನಂತನೂ, ಪರಿಪೂರ್ಣನೂ ಆಗಿರುವುದರಿಂದ ಆತನ ಇಲ್ಲದಿರುವಿಕೆಯನ್ನು ನಾವು ಕಲ್ಪಿಸಿಕೊಳ್ಳಲಾರೆವು, ಆದ್ದರಿಂದ ಆತನ ಅಸ್ತಿತ್ವವನ್ನು ಒಪ್ಪಿಕೊಳ್ಳಲೇಬೇಕು ಎಂಬುದು ಒಂದು ವಿಧಾನ.** ಡೆಕಾರ್ಟ್ ಹೀಗೆ ಹೇಳುತ್ತಾನೆ, "ವಸ್ತುಗಳ ಅಸ್ತಿತ್ವವನ್ನು ಅವುಗಳ ಸತ್ವ (essence) ದಿಂದ ಬೇರ್ಪಡಿಸಲಾಗದು ಎಂದು ಸ್ಪಷ್ಟವಾಗಿ ನನಗೆ ಕಂಡುಬರುತ್ತಿದೆ." ಭಗವಂತನನ್ನು ಜಗತ್ತಿನ ಸತ್ವವೆಂದೇ ಪರಿಗಣಿಸುವುದರಿಂದ, ಅದರ ಅಸ್ತಿತ್ವವನ್ನು ಅಲ್ಲಗಳೆಯಲಾಗದು ಎಂದು ಇದರ ಅರ್ಥ. ಸ್ಪಿನೋಜಾ ಈ ವಿಷಯವನ್ನು ಇನ್ನೂ ಸ್ವಾರಸ್ಯವಾಗಿ ಹೇಳುತ್ತಾನೆ, "ಭಗವತ್ತತ್ತ್ವವೇ ಎಲ್ಲದರ ಸತ್ವವಾಗಿದೆ. ಅದೇ ಇಡೀ ಜಗತ್ತಿನ ಅಸ್ತಿತ್ವಕ್ಕೆ ಕಾರಣವಾಗಿದೆ. ಆದ್ದರಿಂದ ಅಂತಹ ಸತ್ವವನ್ನು ಅದು ಇಲ್ಲದೆಯೇ ಕಲ್ಪಿಸಿಕೊಳ್ಳಲು ಹೇಗೆ ತಾನೇ ಸಾಧ್ಯ?"

ಥಾಮಸ್ ಅಕ್ವಿನಾಸ್ ಎಂಬ ದೈವಶಾಸ್ತ್ರಜ್ಞನ ಪ್ರಕಾರ ಭಗವಂತನ ಅಸ್ತಿತ್ವವು ಸ್ವಯಂವೇದ್ಯವಾದುದು. ಅದಕ್ಕೆ ಬೇರಾವ ಪುರಾವೆಯ ಅಗತ್ಯವೂ ಇಲ್ಲ. ಮೋಸೆಸ್ ದೇವರನ್ನು ಸಂದರ್ಶಿಸಿದಾಗ ಕೇಳಿದನಂತೆ, "ನಿನ್ನ ಹೆಸರೇನು ಎಂದು ನನ್ನ ಜನ ಕೇಳಿದರೆ, ನಾನು ಏನು ತಾನೇ ಹೇಳಲಿ? " ಅದಕ್ಕೆ ದೇವರು ಉತ್ತರ ಕೊಟ್ಟನಂತೆ, "ನಾನು ಯಾರೋ ಅವನೇ" (I am that I am). ಅಕ್ವಿನಾಸ್‌ನ ಪ್ರಕಾರ, 'ಅವನು ಯಾರೋ ಅವನೇ' (He who is) ಎಂಬ ಹೆಸರೇ ಭಗವಂತನಿಗೆ ನೀಡಬಹುದಾದ ಪರಮೋತ್ಕೃಷ್ಟ ನಾಮಧೇಯವಾಗಿದೆ.

ಭಗವಂತನ ಕುರಿತಾದ ಎರಡನೆಯ ಪರಿಕಲ್ಪನೆಯೆಂದರೆ, ನಾವು ಅನುಭವಿಸುವ ಪ್ರಕೃತಿಯ ನಿರ್ಮಾಪಕ ಎಂಬ ದೃಷ್ಟಿಕೋನ. ವೈವಿಧ್ಯಮಯ ಜಗತ್ತಿನ ಹಿಂದೆ ಏಕರೂಪವಾದ ಸೂತ್ರ ಅಥವಾ ಭಾವನೆ ಇದೆ. ಆದ್ದರಿಂದ ಜಗತ್ತು ಅಖಂಡವಾಗಿದೆ ಎಂದು ಗ್ರೀಕ್ ಚಿಂತಕರು ನಂಬಿದ್ದರು. ಆ ಏಕರೂಪತೆಯು ದಿವ್ಯವಾದುದು, ಜಗತ್ತಿನ ಎಲ್ಲಾ ನಿರ್ದಿಷ್ಟ ವಸ್ತುಗಳು ಮತ್ತು ಭಾವನೆಗಳು ಅವುಗಳ ಅಂಶಗಳಷ್ಟೆ ಎಂದು ಅವರ ಅಭಿಪ್ರಾಯವಾಗಿತ್ತು.

ಆ ಅಖಂಡ ಸ್ವರೂಪ ಇರುವುದರಿಂದಲೇ, ಖಂಡವಾಗಿ ಕಾಣುವ ಜಗತ್ತಿನ ವಸ್ತುಗಳಿಗೆ ಅಸ್ತಿತ್ವ ಬಂದಿರುವುದು ಎಂದು ಪ್ಲೋಟಿನಸ್ ಎಂಬ ಗ್ರೀಕ್ ಚಿಂತಕ ಹೇಳುತ್ತಾನೆ. ಅವನ ಪ್ರಕಾರ ಇಡೀ ಜಗತ್ತು ಆ ಅಖಂಡ ವಸ್ತುವಿನ ಮೂಲದ ಒಂದು ಅಂಶವನ್ನಷ್ಟೇ ಪ್ರತಿನಿಧಿಸುತ್ತದೆ. ಈ ಅದ್ವಿತೀಯ ವಸ್ತುವು ಬೇರಾವ ವಸ್ತುವನ್ನೂ ಅವಲಂಬಿಸಿಲ್ಲ. ಆ ನಿರಪೇಕ್ಷ ವಸ್ತುವು ತನಗೆ ತಾನೇ ಇರಬಲ್ಲ, ಬೆಳಗಬಲ್ಲ ಶಕ್ತಿಯನ್ನು ಹೊಂದಿದೆ. ಪ್ಲೋಟಿನಸ್ ಈ ಅಖಂಡ ವಸ್ತುವನ್ನು ದೇವರು ಎಂದು ಕರೆಯಲೂ ನಿರಾಕರಿಸುತ್ತಾನೆ. ಅದು ಅಂತಹ ಎಲ್ಲ ರೀತಿಯ ಕಲ್ಪನೆಗಳಿಗಿಂತ ಅತೀತವಾದದ್ದು ಎಂದು ಹೇಳುತ್ತಾನೆ.

ಮೇಲಿನ ಪರಿಕಲ್ಪನೆಯನ್ನು ಸ್ಪಿನೋಜಾ ಅಲ್ಲಗಳೆಯುತ್ತಾನೆ. ಅವನ ಪ್ರಕಾರ ಪ್ರಕೃತಿಗಿಂತ ಭಿನ್ನವಾದ ದೇವರು ಇರಲಾರನು. ಅವನು ಅನಂತ; ಈ ಅಸ್ತಿತ್ವದ ಸಾರವಸ್ತು, ನಿರಪೇಕ್ಷ, ನಿರ್ವಿಕಾರಿ, ಎಲ್ಲ ಸೀಮಿತ ಭಾವನೆಗಳ ಹಿಂದಿರುವ ಅಸೀಮನೇ ಅವನು. ಅವನೇ ವೈವಿಧ್ಯಮಯ ಪ್ರಕೃತಿಯಾಗಿ ಮಾರ್ಪಡುತ್ತಾನೆ. ಆದರೆ ಕ್ರೈಸ್ತ ಮತ್ತು ಯಹೂದಿ ಧರ್ಮಶಾಸ್ತ್ರಜ್ಞರು ಭಗವಂತನು ಯಾವಾಗಲೂ ಪ್ರಪಂಚಕ್ಕೆ ಅತೀತನಾಗಿದ್ದಾನೆ ಎಂದು ನಂಬುತ್ತಾರೆ. ದೇವರು ಪ್ರಕೃತಿಯ ಸೃಷ್ಟಿಕರ್ತನೇ ಹೊರತು, ಅದರ ಒಳಗೆ ಇರುವವನಲ್ಲ ಎಂದು ಹೇಳುತ್ತಾರೆ.

ಯಾವುದೇ ಕಾರ್ಯಕ್ಕೆ (effect) ಒಂದು ಕಾರಣ (cause) ಇರುವುದು ಆವಶ್ಯಕ. ನಮ್ಮ ದಿನನಿತ್ಯದ ಅನುಭವಕ್ಕೆ ಬರುವ ಪ್ರಕೃತಿಗೂ ಒಂದು ಕಾರಣವಿರಬೇಕು. ಅದು ಯಾವುದು ಎಂದು ವಿಶ್ಲೇಷಿಸುತ್ತ ಹೊರಟಾಗ, ಯಾವುದು ಪ್ರಕೃತಿಯ ಹಾಗೆ ಮಾರ್ಪಡುವುದಿಲ್ಲವೋ ಅಂತಹ ಒಂದು ನಿತ್ಯ ವಸ್ತುವನ್ನು ಸಮೀಪಿಸುತ್ತೇವೆ. ಆ ನಿತ್ಯ ವಸ್ತುವೇ ಪ್ರಕೃತಿಗೆ ಕಾರಣವಾಗಿರಲು ಸಾಧ್ಯ. ಏಕೆಂದರೆ, ಅರಿಸ್ಟಾಟಲ್ ಹೇಳುವಂತೆ, ಚಲನೆ ಅಥವಾ ಮಾರ್ಪಾಡಿನ ಹಿಂದೆ ಒಬ್ಬ ಅಚಲನಾದ ವ್ಯಕ್ತಿ ಅಥವಾ ತತ್ತ್ವ ಇರಲೇ ಬೇಕು. ಕ್ರೈಸ್ತ ಸಂತ ಪಾಲನೂ ಕೂಡ, ಭಗವಂತ ಮತ್ತು ಅವನ ಅಮಿತ ಶಕ್ತಿಯನ್ನು ನಾವು ನೋಡುವ, ವ್ಯಕ್ತವಾದ ಅವನ ಸೃಷ್ಟಿಪ್ರಕಾರಗಳ ಮೂಲಕ ಗ್ರಹಿಸಬಹುದು ಎಂದು ಹೇಳುತ್ತಾನೆ. ಹೀಗೆ ವ್ಯಕ್ತವಾದ ಪ್ರಕೃತಿಯು ಅವ್ಯಕ್ತನಾದ ಭಗವಂತನ ಅರಿವಿಗೆ ಮಾರ್ಗ ತೋರಬಲ್ಲುದು.

ವೇದೋಪನಿಷತ್ತುಗಳಲ್ಲಿ ಈಶ್ವರತತ್ತ್ವ

ಇಲ್ಲಿಯವರೆಗೆ ಮಾಡಿದ ಪಾಶ್ಚಾತ್ಯ ಪರಿಕಲ್ಪನೆಗಳ ಅಧ್ಯಯನವು ದೇವರ ಬಗೆಗಿನ ಭಾರತೀಯ ಪಾರಂಪರಿಕ ಪರಿಕಲ್ಪನೆಗಳನ್ನು ಚೆನ್ನಾಗಿ ಅರಿತುಕೊಳ್ಳಲು ನಮಗೆ ಸಹಾಯ ಮಾಡುತ್ತದೆ. ಸಂಸ್ಕೃತದಲ್ಲಿ ಲೋಕಪಾಲಕನಾದ ದಿವ್ಯಶಕ್ತಿಗೆ **ದೇವತೆ**ಯೆಂದು ಹೆಸರು. ನಿರುಕ್ತದ ಪ್ರಕಾರ, ಸ್ವಯಂಪ್ರಕಾಶನಾಗಿ ಜಗತ್ತನ್ನೇ ಬೆಳಗುವ ದಿವ್ಯತತ್ತ್ವವನ್ನು ವೇದದಲ್ಲಿ **ದೇವ** ಎಂದು ಕರೆದಿದೆ. ಅದನ್ನು ಸೂಚಿಸುವುದೇ ವ್ಯವಹಾರದಲ್ಲಿ ಉಪಯೋಗಿಸುವ ದೇವತೆ ಎಂಬ ಶಬ್ದ. ವೇದಗಳಲ್ಲಿ ಅನೇಕ ದೇವತೆಗಳನ್ನು ಹೆಸರಿಸಿದ್ದರೂ ಅವೆಲ್ಲವೂ ಪರಂಜ್ಯೋತಿಯ ವಿಭೂತಿವಿಶೇಷಗಳ ಪ್ರಶಂಸೆಯಲ್ಲದೆ ಬೇರೆಯಲ್ಲ. ದೇವತೆಯ ಆಕಾರದ ವರ್ಣನೆ ವ್ಯವಹಾರದ ಅನುಕೂಲಕ್ಕಾಗಿಯೇ ಹೊರತು ಬೇರೆಯಲ್ಲ.

ನಾವು ಹಿಂದಿನ ಸಂಚಿಕೆಗಳಲ್ಲಿ ಜಗತ್ತಿನ ಬಗ್ಗೆ ಮತ್ತು ಮಾನವನ ಬಗ್ಗೆ ವಿಚಾರ ಮಾಡಿದ್ದೆವು. ವೇದಗಳ ಪ್ರಕಾರ ಮಾನವನಿಗೂ ಬಾಹ್ಯ ಪ್ರಕೃತಿಗೂ ಇರುವುದು ಕೇವಲ ಭೌತಿಕ ಸಂಬಂಧ ಮಾತ್ರವಲ್ಲ. ಅವೆರಡೂ ಒಂದೇ ತತ್ತ್ವದ ಅಂಶಗಳು. ಹಾಗೆಯೇ ದೇವನ ಮತ್ತು

ಮಾನವನ ಸಂಬಂಧ ಕೂಡ ಪರಸ್ಪರ ಪೋಷಕವಾದುದು. ದ್ಯಾವಾಪೃಥಿವಿಗಳು ಲೋಕಕ್ಕೆ ಪಿತೃಗಳಾದರೆ, ಪರ್ಜನ್ಯಾದಿಗಳು ಲೋಕಪೋಷಕರು, ವರುಣಾದಿಗಳು ವಿಶ್ವನಿಯಮಪಾಲಕರು. ಇವರೆಲ್ಲರೂ ವಿಶ್ವಪ್ರಭುವಿನ ದಿವ್ಯಶಕ್ತಿಯ ವಿಭಿನ್ನ ವಿಶೇಷಗಳು, ಅಷ್ಟೆ.

ಈ ವಿಶ್ವಪ್ರಭುವೇ ವಿಶ್ವನಿಯಾಮಕನೂ ಆಗಿದ್ದಾನೆ. ಅವನಿಂದ ಪ್ರವರ್ತಕವಾದುದೇ 'ಋತ' ಅಥವಾ ವಿಶ್ವನಿಯಮ. ಅದೇ ಇಡೀ ವಿಶ್ವಕ್ಕೆ ಆಧಾರಭೂತವಾದ ವ್ಯವಸ್ಥೆ. ಋತದ ಸ್ವರೂಪ ಎರಡು ವಿಧ. ಒಂದು ಯಾವ ವ್ಯತ್ಯಾಸವೂ ಹೊಂದದೆ ಇರುವ ಆದಿಶಕ್ತಿ. ಎರಡನೆಯದು ಜಗತ್ತನ್ನೆಲ್ಲ ವ್ಯಾಪಿಸಿ, ಕಾಲದೇಶಗಳ ಚೌಕಟ್ಟಿನಲ್ಲಿ ನಿಯಮಬದ್ಧವಾಗಿ ಪಾಲಿಸುವ ವ್ಯವಹಾರಶಕ್ತಿ. ಇಲ್ಲಿ ವ್ಯವಹಾರ ಶಕ್ತಿಯು ಆದಿಶಕ್ತಿಗೆ ಅಧೀನವಾಗಿ ಕಾರ್ಯವೆಸಗಬೇಕು.

ಈ ಋತತತ್ತ್ವಕ್ಕೂ ಈಶ್ವರನಿಗೂ ತಾದಾತ್ಮ್ಯವನ್ನು ವೇದಗಳಲ್ಲಿ ಹೇಳಲಾಗಿದೆ. "ವಿಶ್ವನಿಯಾಮಕನಾದ ಋತತತ್ತ್ವವು ಬಹುಪ್ರಕಾರವಾಗಿದೆ ಮತ್ತು ಆಹ್ಲಾದಕರವಾಗಿದೆ" ಎಂದು ಋಗ್ವೇದ ಹೇಳುತ್ತದೆ. ಈ ಋತತತ್ತ್ವದಿಂದ ಪ್ರೇರಿತವಾದ ಕಾರ್ಯಗಳನ್ನೆಲ್ಲವನ್ನೂ 'ಯಜ್ಞ' ಎಂದು ಕರೆಯಲಾಗಿದೆ. ಜಗನ್ನಿಯಾಮಕನಾದ ಈಶ್ವರನೇ ನಿತ್ಯವೂ ಯಜ್ಞದಲ್ಲಿ ಪ್ರತಿಷ್ಠಿತನಾಗಿದ್ದಾನೆ ಎಂದು ಭಗವದ್ಗೀತೆ ಹೇಳುತ್ತದೆ.

ಈ ವಿಶ್ವನಿಯಾಮಕನ ಕಲ್ಪನೆಯೇ ವಿಶ್ವಾತ್ಮನಾಗಿ ಒಡಮೂಡಿರುವುದನ್ನು ಉಪನಿಷತ್ತುಗಳಲ್ಲಿ ನಾವು ಕಾಣಬಹುದು. ಇಲ್ಲಿ ಭಗವಂತನ ಕಲ್ಪನೆಯು ಎರಡು ವಿಧವಾಗಿರುವುದನ್ನು ಗಮನಿಸಬಹುದು. **೧. ಸಗುಣ ಸಾಕಾರ ೨. ನಿರ್ಗುಣ ನಿರಾಕಾರ.**

ಸಗುಣ ಸಾಕಾರ ಭಗವತ್ತತ್ತ್ವವನ್ನು **ಈಶ್ವರ, ಹಿರಣ್ಯಗರ್ಭ, ವಿರಾಟ್** ಎಂದೆಲ್ಲ ಉಪನಿಷತ್ತುಗಳಲ್ಲಿ ವಿವರಿಸಲಾಗಿದೆ. ತೈತ್ತಿರೀಯ ಉಪನಿಷತ್ತು, ಎಲ್ಲಿಂದ ಎಲ್ಲಾ ಜೀವಿಗಳು ಹುಟ್ಟುವವೋ ಅನಂತರ ಯಾವುದರಲ್ಲಿ ಅವು ಜೀವಿಸುತ್ತವೆಯೋ, ಕಡೆಯಲ್ಲಿ ಎಲ್ಲಿ ಅವೆಲ್ಲವೂ ವಿಲೀನ ಹೊಂದುವವೋ ಅದನ್ನೇ ಬ್ರಹ್ಮನೆಂದು ಹೇಳುತ್ತದೆ. ಈಶಾವಾಸ್ಯ ಉಪನಿಷತ್ತು ನಾವು ಕಾಣುವ ಪ್ರಪಂಚವೆಲ್ಲವನ್ನೂ ಈಶನಿಂದ, ಅಂದರೆ, ಭಗವಂತನಿಂದ ಮುಚ್ಚಿಬಿಡಬೇಕು ಎಂದು ಹೇಳುತ್ತದೆ. "ಎಲ್ಲ ಲೋಕಗಳೂ ಯಾರಲ್ಲಿ ಆಶ್ರಯವನ್ನು ಹೊಂದಿವೆಯೋ ಅವನನ್ನು ಯಾರೂ ಮೀರಲಾರರು. ಅವನೇ ಈಶ್ವರ. ಹೇಗೆ ಅಗ್ನಿಯು ಒಂದೇ ಆಗಿದ್ದರೂ ತಾನು ಸುಡುವ ವಸ್ತುಗಳ ಭೇದವನ್ನು ಅನುಸರಿಸಿ ಬಹುವಿಧವಾಗಿ ತೋರುವುದೋ ಹಾಗೆಯೇ ಸರ್ವಭೂತಗಳಲ್ಲಿಯೂ ಅಂತರಾತ್ಮನ ರೂಪದಲ್ಲಿ ಇದ್ದುಕೊಂಡು, ಭಗವಂತನು ಬೇರೆ ಬೇರೆ ಶರೀರಗಳಲ್ಲಿ, ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಳ್ಳುವನು" ಎಂದು ಕಠೋಪನಿಷತ್ತು ಬಣ್ಣಿಸುತ್ತದೆ.[೩]

ಐತರೇಯ ಉಪನಿಷತ್ತಿನಲ್ಲಿ ಜಗತ್ತಿನ ಉತ್ಪತ್ತಿ–ಸ್ಥಿತಿ–ಪ್ರಳಯಗಳನ್ನು ಮಾಡುವವನೂ, ಅಸಂಸಾರಿಯೂ, ಸರ್ವಶಕ್ತನೂ, ಸರ್ವಜ್ಞನೂ ಆದ ಪರಮಾತ್ಮನು ಈ ಜಗತ್ತನ್ನೆಲ್ಲ, ಆಕಾಶಾದಿ ಕ್ರಮದಿಂದ ಸೃಷ್ಟಿಸಿದನು ಎಂದು ಹೇಳಿದೆ. ಮುಂಡಕೋಪನಿಷತ್ತು ಕಾವ್ಯಮಯವಾಗಿ, "ಮುಂದಿರುವ ಇದು ಅಮೃತವಾದ ಬ್ರಹ್ಮವೇ ಆಗಿದೆ. ಹಿಂದೆಯೂ ದಕ್ಷಿಣಕ್ಕೂ ಉತ್ತರಕ್ಕೂ ಇರುವುದು ಬ್ರಹ್ಮವೇ. ಕೆಳಗೂ ಮೇಲೂ ಪ್ರಸರಿಸುವುದು ಬ್ರಹ್ಮವೇ. ಈ ಜಗತ್ತೆಲ್ಲವೂ ಶ್ರೇಷ್ಠತಮವಾದ ಬ್ರಹ್ಮವೇ" ಎಂದು ಸರ್ವವ್ಯಾಪಿಯಾದ ಈಶ್ವರನ ಮಹಿಮೆಯನ್ನು ಕೊಂಡಾಡುತ್ತದೆ.[೪] ಶ್ವೇತಾಶ್ವತರ ಉಪನಿಷತ್ತು ಸರ್ವವ್ಯಾಪಿಯಾದ ಈಶ್ವರನ ವಿವರಣೆಯನ್ನು ಹೀಗೆ ನೀಡುತ್ತದೆ: "ಪರಮೇಶ್ವರನು ಎಲ್ಲಾ ಕಡೆಯಲ್ಲೂ ಕಣ್ಣುಗಳನ್ನೂ ಮುಖಗಳನ್ನೂ ಬಾಹುಗಳನ್ನೂ ಪಾದಗಳನ್ನೂ ಹೊಂದಿರುತ್ತಾನೆ. ಆ ದೇವನೊಬ್ಬನೇ ದ್ಯುಲೋಕ, ಭೂಲೋಕಗಳನ್ನು ಸೃಷ್ಟಿಸಿ ಮನುಷ್ಯರನ್ನು ಬಾಹುಗಳಿಂದಲೂ, ಹಕ್ಕಿಗಳನ್ನು ರೆಕ್ಕೆಗಳಿಂದಲೂ ಸಂಯೋಜಿಸುತ್ತಾನೆ."[೫] ಅದಲ್ಲದೆ ಇನ್ನೊಂದು ಪ್ರಸಿದ್ಧವಾದ ಮಂತ್ರವು. "ಮಾಯೆಯೆಂದರೆ ಈ ಪ್ರಕೃತಿ. ಮಹೇಶ್ವರನೇ ಮಾಯಿನ್ (ಆ ಪ್ರಕೃತಿಗೆ ಅಸ್ತಿತ್ವವನ್ನೂ, ಸ್ಫೂರ್ತಿಯನ್ನೂ ನೀಡುತ್ತ ಅದರ ಆಧಾರವಾಗಿದ್ದುಕೊಂಡು ಪ್ರೇರೇಪಿಸುವವನು)"[೬] ಎಂದು ಹೇಳುತ್ತದೆ.

ಮೇಲಿನ ವಿವರಗಳಿಂದ ಮುಂದಿನ ನಿಷ್ಕರ್ಷೆಗಳಿಗೆ ಬರಬಹುದು: ಈಶ್ವರನು ಪರತತ್ತ್ವದ ಸಗುಣ, ಸಾಕಾರ ಅಂಶವಷ್ಟೇ ಅಲ್ಲದೆ ಬೇರೆಯಲ್ಲ. ಉಪನಿಷತ್ತುಗಳಲ್ಲಿ ಅದನ್ನೆಂದೂ ಮಿಥ್ಯೆಯೆಂದಾಗಲೀ ಮಾಯೆಯೆಂದಾಗಲೀ ಕರೆದಿಲ್ಲ. ಉಪನಿಷತ್ತುಗಳಲ್ಲಿ ಸಾಕಾರದ ಕಲ್ಪನೆ ನಿರಾಕಾರದ ಕಲ್ಪನೆಯ ಜೊತೆಜೊತೆಗೇ ಬರುತ್ತದೆ.

ಭಗವದ್ಗೀತೆಯಲ್ಲಿ ಈಶ್ವರನ ಕಲ್ಪನೆ ಇನ್ನೂ ವ್ಯಾಪಕಗೊಂಡಿದೆ. ಪರಮೇಶ್ವರನ ವಿಭೂತಿಯು ಜಗತ್ತೆಲ್ಲವನ್ನೂ ಪ್ರಕಾಶಗೊಳಿಸಿದೆ. ಈಶ್ವರನು ಎಲ್ಲಾ ಜೀವಿಗಳ ಹೃದಯದಲ್ಲಿ ಅಂತರ್ಯಾಮಿಯಾಗಿ ನೆಲೆಸಿದ್ದಾನೆ. ಅವನೇ ಕ್ಷೇತ್ರಜ್ಞ (ಕ್ಷೇತ್ರದ ಒಡೆಯ). ಕ್ಷೇತ್ರವೆನಿಸಿರುವ ಜೀವಿಗಳ ಶರೀರದಲ್ಲಿ ಅವನು ಇರುತ್ತಾನೆ. ಅವನ ಶಕ್ತಿರೂಪಗಳಾಗಿ ಎರಡು ಪ್ರಕೃತಿಗಳುಂಟು. ಒಂದು ಪರಾ ಪ್ರಕೃತಿ, ಇನ್ನೊಂದು ಅಪರಾ ಪ್ರಕೃತಿ. ಜೀವಿಗಳು ಪರಾಪ್ರಕೃತಿ ಎನಿಸಿಕೊಂಡರೆ, ಜಡ ಜಗತ್ತು ಅಪರಾಪ್ರಕೃತಿಯಾಗುತ್ತದೆ. ಅವುಗಳನ್ನು ಮೀರಿದ ಉತ್ತಮ ಪುರುಷನೇ ಪುರುಷೋತ್ತಮನು. ಅವನೇ ಇಡೀ ಪ್ರಪಂಚದಲ್ಲಿ ಓತಪ್ರೋತನಾಗಿ ನೆಲೆಸಿದ್ದಾನೆ. ಇದು ಭಗವದ್ಗೀತೆಯಲ್ಲಿ ಬರುವ ಈಶ್ವರ ಕಲ್ಪನೆಯ ಸಂಕ್ಷಿಪ್ತ ಚಿತ್ರಣ.

ಯೋಗಶಾಸ್ತ್ರವು ಭಗವಂತನನ್ನು ವಿಶೇಷವಾದ ರೀತಿಯಲ್ಲಿ ವರ್ಣಿಸಿದೆ. ಸಮಾಧಿ ಪಾದದಲ್ಲಿ, ಸಮಾಧಿ ಲಾಭವನ್ನು ಈಶ್ವರನಲ್ಲಿ ಭಕ್ತಿ ಇಡುವುದರಿಂದಲೂ ಪಡೆಯಬಹುದು ಎಂದು ಹೇಳಲಾಗಿದೆ.

> **ಪ್ರತಿಯೊಬ್ಬ ಮಾನವನ ಶ್ರೇಷ್ಠ ಆದರ್ಶವನ್ನೇ ದೇವರು ಎಂದು ಕರೆಯುವುದು. ಪಂಡಿತನಾಗಲಿ, ಪಾಮರನಾಗಲಿ, ನಿರಕ್ಷರಕುಕ್ಷಿಯಾಗಲಿ ಸುಸಂಸ್ಕೃತನಾಗಲಿ ಅಲ್ಲದಿರಲಿ, ಪ್ರತಿಯೊಬ್ಬರಿಗೂ ಶಕ್ತಿ, ಸೌಂದರ್ಯ ಮತ್ತು ಪವಿತ್ರತೆಗಳ ಪರಾಕಾಷ್ಠೆಯೇ ನಮ್ಮನ್ನು ಪ್ರೀತಿಸುವ ಮತ್ತು ನಾವು ಪ್ರೀತಿಸಬಲ್ಲ ದೇವರಾಗಿರುವನು. ಪ್ರತಿಯೊಬ್ಬರಲ್ಲಿಯೂ ಸ್ವಾಭಾವಿಕವಾಗಿ ಈ ಆದರ್ಶ ಒಂದಲ್ಲ ಒಂದು ರೀತಿಯಲ್ಲಿ ಇರುವುದು. ಅದು ನಮ್ಮ ಜೀವನದ ಅಂಶವಾಗಿದೆ. ಈ ಆದರ್ಶವನ್ನು ನಿತ್ಯ ಜೀವನದಲ್ಲಿ ಮನಗಾಣುವುದಕ್ಕಾಗಿಯೇ ಮಾನವಸ್ವಭಾವ ಪ್ರಯತ್ನಿಸುತ್ತಿದೆ.** –ಸ್ವಾಮಿ ವಿವೇಕಾನಂದ

ಮುಂದಿನ ಸೂತ್ರವು ಈಶ್ವರನು ಯಾರು ಎಂಬ ಪ್ರಶ್ನೆಗೆ, ಮನಸ್ಸಿನ ಕ್ಲೇಶವೃತ್ತಿಗಳು, ಕರ್ಮಗಳು ಮತ್ತು ಅವುಗಳ ಫಲಗಳು ಹಾಗೂ ಸಂಸ್ಕಾರಗಳು ಯಾರನ್ನು ತಟ್ಟಲಾರವೋ ಅಂತಹ ವಿಶಿಷ್ಟ ಪುರುಷನೇ ಈಶ್ವರ ಎಂದು ಉತ್ತರ ನೀಡುತ್ತದೆ. ಅವನಲ್ಲಿ ಜ್ಞಾನವು ತನ್ನ ನಿರತಿಶಯತ್ವವನ್ನು ಪಡೆಯುತ್ತದೆ. ಆದ್ದರಿಂದಲೇ ಅವನು ಸರ್ವಜ್ಞ ಎನ್ನಿಸಿಕೊಳ್ಳುತ್ತಾನೆ. ಅನಾದಿಯಾದ ಅವನು ಪ್ರಾಚೀನ ಕಾಲದ ಆಚಾರ್ಯರಿಗೂ ಗುರುವಾಗಿದ್ದಾನೆ. ಅವನನ್ನು ಸೂಚಿಸುವ ಒಂದೇ ಶಬ್ದವೆಂದರೆ ಓಂಕಾರ. ಇದು ಯೋಗಶಾಸ್ತ್ರದಲ್ಲಿ ಬರುವ ಈಶ್ವರನ ವಿವರಣೆ.

ಅಖಂಡ ತತ್ತ್ವ

ಜಗತ್ತು, ಜೀವಿ ಮತ್ತು ಈಶ್ವರ – ಈ ಮೂರೂ ತತ್ತ್ವಗಳ ಅಂತಸ್ಸತ್ವವು ಚೈತನ್ಯವೆಂದು ವೇದಾಂತವು ಪ್ರತಿಪಾದಿಸುತ್ತದೆ. ಚೈತನ್ಯವೇ ಜಗತ್ತಿನ ರೂಪದಲ್ಲಿ, ಜೀವಿಯ ರೂಪದಲ್ಲಿ ಮತ್ತು ಈಶ್ವರನ ರೂಪದಲ್ಲಿ ಕಾಣಿಸಿಕೊಳ್ಳುತ್ತಿದೆ. ಎಲ್ಲವೂ ಆಗಿರುವ, ಅದ್ವಿತೀಯವಾದ ಆ ಪರಮಾರ್ಥ ವಸ್ತುವನ್ನೇ ನಿರ್ಗುಣ, ನಿರ್ವಿಕಾರ ರೂಪದಲ್ಲಿ ಉಪನಿಷತ್ತುಗಳು ವರ್ಣಿಸುತ್ತವೆ. **ಜಗತ್ತು, ಜೀವಿ, ಈಶ್ವರ** – ಇವುಗಳು ಸಾಪೇಕ್ಷ ತತ್ತ್ವಗಳು. ಅವುಗಳ ಮೂಲರೂಪವಾದ ಚೈತನ್ಯವು ನಿರಪೇಕ್ಷ ತತ್ತ್ವ.

ಈ ತತ್ತ್ವದ ಮೂರು ಲಕ್ಷಣಗಳು – **ಸತ್, ಚಿತ್, ಆನಂದ. ಸತ್** ಎಂದರೆ ಇರುವಿಕೆ. **ಚಿತ್** ಎಂದರೆ ಪ್ರಕಾಶ ಅಥವಾ ಜ್ಞಾನ. ಆನಂದ ಎಂದರೆ ಅನುಭವವೇದ್ಯತೆ. ಈ ಮೂರೂ ಗುಣಗಳನ್ನು ಜಗತ್ತಿನ ಎಲ್ಲಾ ವಸ್ತುಗಳಲ್ಲಿಯೂ, ಜೀವಿಗಳಲ್ಲಿಯೂ, ಈಶ್ವರನಲ್ಲೂ ಕಾಣುತ್ತೇವೆ. ಇವು ಜಗತ್ತು–ಜೀವಿ–ಈಶ್ವರಗಳಲ್ಲಿ ಕಂಡು ಬರುವ ಸಮಾನ ಅಂಶಗಳು. ಈ ಸಮಾನ ಅಂಶಗಳು ಸೇರಿ ನಿತ್ಯವೂ, ಸತ್ಯವೂ, ಅನಂತವೂ, ನಿರಪೇಕ್ಷವೂ ಆದ ಚೈತನ್ಯವೆನಿಸಿಕೊಳ್ಳುತ್ತದೆ. ಉಳಿದೆಲ್ಲ ಗುಣಗಳು, ನಾಮರೂಪಗಳ ಪ್ರಭೇದಗಳು ಅಷ್ಟೇ. ಅನಿತ್ಯವಾದ ಅವುಗಳ ಭಾವನೆಯು ನಷ್ಟವಾದಾಗ, ಉಳಿಯುವುದು ಸತ್–ಚಿತ್–ಆನಂದ ಸ್ವರೂಪವಾದ ಬ್ರಹ್ಮವೊಂದೇ.

ಮಾತಿಗೂ, ಮನಸ್ಸಿಗೂ ನಿಲುಕದ ಆ ಪರತತ್ತ್ವದ ತಿಳಿವಳಿಕೆಯನ್ನು ಅದರ ಪ್ರಭೇದಗಳಾದ **ಜಗತ್ತು–ಜೀವಿ–ಈಶ್ವರಗಳ** ಮೂಲಕವೇ ಪಡೆಯಬೇಕು. ಇವೆಲ್ಲಕ್ಕೂ ಆಧಾರಭೂತವಾದುದು ಆ ಪರತತ್ತ್ವವೇ.

ಇಲ್ಲಿ ವೇದಾಂತವು ಅಸ್ತಿತ್ವದ ಅಖಂಡತೆಯನ್ನು ಪ್ರತಿಪಾದಿಸುತ್ತದೆ. ಹೊರ ಜಗತ್ತಿನಲ್ಲಿ ಕಾಣಬರುವ ದ್ವೈತಭಾವಗಳೆಲ್ಲ ಮಿಥ್ಯೆ ಎಂದು ಹೇಳುತ್ತದೆ. ಇದು ಮಾನವನ ಮನಸ್ಸು–ಬುದ್ಧಿಗಳು ಹೋಗಿ ತಲುಪಬಲ್ಲ ಅತ್ಯುನ್ನತ ಚಿಂತನಾ ಶಿಖರ ಎಂದು ಹೇಳಬಹುದು. ಈ ಚಿಂತನಾ ಶಿಖರವನ್ನು ಏರಿದ ಬೌದ್ಧಿಕ ಪರ್ವತಾರೋಹಿಗಳು ನಮ್ಮ ಋಷಿಮುನಿಗಳು.

ಆದರೆ ಅವರು ಅದನ್ನು ಕೇವಲ ಬೌದ್ಧಿಕ ವಿಚಾರವೆಂದಷ್ಟೇ ಪರಿಗಣಿಸಲಿಲ್ಲ. ಅದನ್ನು ಅನುಭವವೇದ್ಯವನ್ನಾಗಿಯೂ ಮಾಡಿಕೊಂಡರು. ಎಲ್ಲ ದ್ವೈತಭಾವನೆಗಳನ್ನೂ ಮೀರಿಹೋಗಿ, ಆತ್ಮಾನಂದದಲ್ಲಿ ತಲ್ಲೀನರಾದರು. ಆಗ ಅವರಿಗೆ ಪ್ರಪಂಚ, ಜೀವಿ ಮತ್ತು ಈಶ್ವರ – ಇವರುಗಳು ಪ್ರತ್ಯೇಕವೆಂಬಂತೆ ಕಾಣಿಸಲಿಲ್ಲ. ಅವೆಲ್ಲ ಕಲ್ಪನೆಗಳೂ ಸಚ್ಚಿದಾನಂದ ಸಾಗರದಲ್ಲಿ ವಿಲೀನವಾಗುವುದನ್ನು ಅವರು ಕಂಡುಕೊಂಡರು . ಹಾಗೆಂದೇ ಅವರಿಗೆ, **'ಅಹಂ ಬ್ರಹ್ಮಾಸ್ಮಿ'** (ನಾನೇ ಬ್ರಹ್ಮ) ಎಂದು ಹೇಳಲು ಸಾಧ್ಯವಾಯಿತು; **'ತತ್ ತ್ವಮ್ ಅಸಿ'** (ಜೀವಿಯಾದ ನೀನು, ಎಲ್ಲವನ್ನೂ ಮೀರಿದ ಬ್ರಹ್ಮವೇ ಆಗಿದ್ದೀಯೆ) ಎಂದು ಉಪದೇಶಿಸಲು ಸಾಧ್ಯವಾಯಿತು; **'ಪ್ರಜ್ಞಾನಂ ಬ್ರಹ್ಮ'** (ವಿವಿಧ ಬಗೆಯ ಎಲ್ಲಾ ಅರಿವು ಅಥವಾ ಅನುಭವವೂ ಬ್ರಹ್ಮವೇ) ಎಂಬ ಅನುಭವ ಪಡೆಯಲೂ, **'ಅಯಮಾತ್ಮಾ ಬ್ರಹ್ಮ'** (ಶರೀರದಲ್ಲಿ ಕಂಡುಬರುವ ಆತ್ಮವೂ ಬ್ರಹ್ಮವೇ) ಎನ್ನುತ್ತಾ ಜೀವಿ ಮತ್ತು ಚೈತನ್ಯಗಳಲ್ಲಿ ಅಭೇದವನ್ನು ಪರಿಭಾವಿಸಲೂ ಸಾಧ್ಯವಾಯಿತು.

ಉಪಸಂಹಾರ

ಒಟ್ಟಿನಲ್ಲಿ ಭಾರತೀಯರ ದೃಷ್ಟಿ ಅಖಂಡ ದೃಷ್ಟಿ, ಸಮಸ್ಯೆಯ ದೃಷ್ಟಿ, ಐಕ್ಯ ದೃಷ್ಟಿ. ಜೀವನದ ಎಲ್ಲಾ ಆಯಾಮಗಳಲ್ಲಿಯೂ, ಚಿಂತನೆಯ ಎಲ್ಲ ಹಂತಗಳಲ್ಲಿಯೂ ಭಾರತೀಯರ ಮನಸ್ಸು ಸಮನ್ವಯ ಮತ್ತು ಅಖಂಡತೆಯನ್ನು ಸಾಧಿಸುವುದರಲ್ಲಿಯೇ ತೊಡಗುವುದು. ಈ ಬಗೆಯ ದೃಷ್ಟಿಯನ್ನೇ **ಆಧ್ಯಾತ್ಮಿಕ ದೃಷ್ಟಿ** ಎಂದು ಕರೆಯುವುದು. ಇದೇ ಶತಶತಮಾನಗಳಿಂದಲೂ ಭಾರತೀಯ ಸಂಸ್ಕೃತಿ ಮತ್ತು ಸಭ್ಯತೆಗಳ ದಾರಿದೀಪವಾಗಿರುವುದು; ಐದು ಸಹಸ್ರ ವರ್ಷಗಳಿಂದ ಭಾರತೀಯ ಧರ್ಮ ಮತ್ತು ತತ್ತ್ವಶಾಸ್ತ್ರಗಳನ್ನು ನಿರಂತರವಾಗಿ ಮುನ್ನಡೆಸಿರುವುದು.

ಈ ಅಖಂಡ ದೃಷ್ಟಿಯು ಅನುಭವಗಮ್ಯವಾಗುವುದೇ ಮಾನವನ ಜೀವಿತದ ಉನ್ನತ ಧ್ಯೇಯವಾಗಿದೆ. ಆ ಧ್ಯೇಯಸಾಧನೆಗೆ ಮಾಡುವ ಸತತ ಪರಿಶ್ರಮವೇ ಆಧ್ಯಾತ್ಮಿಕ ಸಾಧನೆ ಎನಿಸುತ್ತದೆ. ಸಾಧನೆಯಲ್ಲಿ ನಮ್ಮ ಮನಸ್ಸು ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮನಸ್ಸೇ ನಮ್ಮೆಲ್ಲ ಬಂಧನಕ್ಕೂ, ಮುಕ್ತಿಗೂ ಕಾರಣವಾಗಿದೆ ಎಂದು ವಿದ್ವಾಂಸರು ಹೇಳುತ್ತಾರೆ. ಮನಸ್ಸಿನ ನಿರೋಧವೇ ಯೋಗಶಾಸ್ತ್ರದ ಗುರಿ. ಏಕಾಗ್ರತೆಯ ಸಾಧನೆಯೇ ಅದರ ಫಲ. ಪರಿಪೂರ್ಣ ಏಕಾಗ್ರತೆ ಅಥವಾ ಸಮಾಧಿಯ ಮೂಲಕವೇ ಕೈವಲ್ಯಜ್ಞಾನ ಪ್ರಾಪ್ತಿ.

ಯೋಗಶಾಸ್ತ್ರವು ಕೇವಲ ಆಧ್ಯಾತ್ಮಿಕ ಸಾಧನೆಗೆ ಮಾತ್ರವಲ್ಲದೆ, ನಮ್ಮ ದೈನಂದಿನ ಚಟುವಟಿಕೆಗಳ ಗುಣಮಟ್ಟದಲ್ಲಿಯೂ ಕ್ರಾಂತಿಕಾರಕ ಪರಿವರ್ತನೆಯನ್ನು ಉಂಟುಮಾಡಬಲ್ಲದು; ನಮ್ಮ ಪ್ರಜ್ಞೆಯನ್ನು ಉನ್ನತ ಹಂತಗಳಿಗೆ ಒಯ್ದು ಶಾಂತಿ ಸಮಾಧಾನಗಳನ್ನು ತರಬಲ್ಲುದು. ಆದ್ದರಿಂದ ಮನೋವೈಜ್ಞಾನಿಕ ದೃಷ್ಟಿಯಿಂದ ಪ್ರಾಚೀನ ಯೋಗ ಶಾಸ್ತ್ರವನ್ನು ಅಧ್ಯಯನ ಮಾಡುವುದು ಬಹಳ ಲಾಭಕಾರಿ. ಅದನ್ನೇ ನಾವು ಮುಂದಿನ ಸಂಚಿಕೆಗಳಲ್ಲಿ ಮಾಡುವುದು.

(ಮುಂದಿನ ತಿಂಗಳು: ಮನೋವಿಜ್ಞಾನವಾಗಿ ಯೋಗದರ್ಶನ)

ಆಕರಗಳು:

೧. ಬೃಹದ್ದೇವತಾ, ೧–೬೧–೭೪
೨. ಕಠೋಪನಿಷತ್ತು, ೨:೫, ೮–೯
೩. ಮುಂಡಕೋಪನಿಷತ್ತು, ೨:೧೨
೪. ಶ್ವೇತಾಶ್ವತರ ಉಪನಿಷತ್ತು, ೩:೪.
೫. ಶ್ವೇತಾಶ್ವತರ ಉಪನಿಷತ್ತು, ೪:೧೦